






ಆರಂಭಿಸಿತು. ಪ್ರವಾಸ ಆರಂಭದ ಕೆಲವು ಹೊತ್ತಿನಲ್ಲೇ ನನಗೆ 'ಸೀ ಸಿಕ್‌ನೆಸ್' ಎದುರಾಗಿ ತಲೆಸುತ್ತು ಕಂಡುಬಂತು. ಮಾತ್ರೆ ತೆಗೆದುಕೊಂಡ ಮೇಲೆ ಸುಧಾರಿಸಿ ಊಟಕ್ಕೆ ತೆರಳಲು ಅಣಿಯಾದೆವು.

ವಿಶಾಲವಾದ ಊಟದ ಹಾಲ್‌ಗೆ ತೆರಳಿದಾಗ ಅಲ್ಲಿ ಅಚ್ಚರಿ ಕಾದಿತ್ತು. ಮಂಗಳೂರಿನವರೇ ಒಂದಿಷ್ಟು ಮಂದಿ ಹಡಗಿನ ಸಿಬ್ಬಂದಿಯಾಗಿದ್ದರು. ಸಾವಿರಾರು ಮೈಲಿ ದೂರದ ಅಪರಿಚಿತ ಸ್ಥಳದಲ್ಲಿ ತುಳು ಮಾತನಾಡುವ ಜನರು ಸಿಕ್ಕಿದ್ದು ನಿಜಕ್ಕೂ ಪ್ರವಾಸದ ಖುಷಿಯನ್ನು ಇಮ್ಮಡಿಗೊಳಿಸಿತ್ತು.

ಆಹಾರದ ವೈವಿಧ್ಯಕ್ಕೆ ಸಂಬಂಧಿಸಿ ಹಡಗಿನಲ್ಲಿ ಯಾವುದೇ ಕೊರತೆಯಿಲ್ಲ. ಆದರೆ ಸಸ್ಯಾಹಾರಿಗಳಿಗೆ ಸ್ವಲ್ಪ ಕಡಿಮೆ ಅವಕಾಶಗಳಿವೆ. ಊಟ ಮಾಡಿ ಕ್ಯಾಸಿನೋದಲ್ಲಿ ಆಟವಾಡಲು ತೆರಳಿದ ನಾನು ಒಂದಿಷ್ಟು ಹಣ ಕಳೆದುಕೊಂಡ ಮೇಲೆ ಅದರಿಂದ ದೂರವುಳಿದೆ. ಅಲ್ಲಿಂದ ಪ್ರತಿ ರಾತ್ರಿ ವೇಳೆ ಹಡಗಿನ ವೇದಿಕೆಯಲ್ಲಿ ನಡೆಯುತ್ತಿದ್ದ ಮ್ಯಾಜಿಕ್ ಶೋ, ಹಾಸ್ಯಕೂಟ, 'ಮಜಾ ಟಾಕೀಸ್'ಅನ್ನು ಹೋಲುವ ಅನೇಕ ಕಾರ್ಯಕ್ರಮಗಳಿಗೆ ಹಾಜರಾಗಲು ಆರಂಭಿಸಿದೆವು.

ಮೊದಲ ದಿನ ಇನ್ನೇನು ಹಡಗು ಸುತ್ತಾಡಿ ಕೋಣೆಗೆ ಬರುವಷ್ಟರಲ್ಲಿ ಮರುದಿನದ ಟೈಮ್ ಟೇಬಲ್ ಸಿದ್ಧವಿತ್ತು. ರಾತ್ರಿ ಕಳೆದು ಬೆಳಗ್ಗೆ ಎದ್ದು ನೋಡುವಾಗ ಉತ್ತರ ಅಮೆರಿಕ ಹೈಟಿ ಕೈ ಬೀಸಿ ಕರೆಯುತ್ತಿತ್ತು.

ಹಡಗಿನಿಂದ ಕೆಳಗೆ ಕಾಲಿಡುತ್ತಿದ್ದಂತೆಯೇ 400 ವರ್ಷಗಳ ಕಾಲ ಸ್ಪೇನ್ ಮತ್ತು ಫ್ರಾನ್ಸ್ ಇಲ್ಲಿ ಹೊಂದಿದ್ದ ವಸಾಹತು ಇತಿಹಾಸದ ಘಟನೆಗಳು ಮನಸ್ಸಿನ ಸ್ಮೃತಿ ಪಟಲದಲ್ಲಿ ಹಾದುಹೋದವು. ಐದು ವರ್ಷಗಳ ಹೋರಾಟದ ಮೂಲಕ ಕ್ರಾಂತಿ ನಡೆಸಿ ಸ್ವಾತಂತ್ರ್ಯ ಪಡೆದ ಹೈಟಿಯಲ್ಲಿ ಒಂದಿಷ್ಟು ಶಾಪಿಂಗ್ ಮಾಡಿದೆವು. ಮರದಿಂದಲೇ ತಯಾರಿಸಿದ ಗೊಂಬೆ, ಮನುಷ್ಯನ ಕೆತ್ತನೆಗಳು, ವಿವಿಧ ಮಾದರಿಯ ಆಟಿಕೆಗಳನ್ನು ನೋಡಿದಾಗ ನಮ್ಮ ಚನ್ನಪಟ್ಟಣದ ಗೊಂಬೆಗಳು ಮನಸ್ಸಿನಲ್ಲಿ ಹಾದು ಹೋದವು. ಖಾಸಗಿ ದ್ವೀಪವೊಂದರಲ್ಲಿ ಊಟ ಮಾಡಿ ಹಿಂತಿರುಗಿದೆವು. ಸುಮಾರು ನಾಲ್ಕೈದು ತಾಸಿನ ಸುತ್ತಾಟದಲ್ಲಿ ದಾಸವಾಳ ಹೂ, ಒಣ ತೆಂಗಿನಕಾಯಿ ಮತ್ತು ನೆಲ್ಲಿಕಾಯಿ ನೋಡಿದಾಗ ಮನಸ್ಸು ಮತ್ತೆ ಊರಿನ ನೆನಪುಗಳಲ್ಲಿ ಆರ್ದ್ರಗೊಂಡಿತು.

ಮೂರನೇ ದಿನದ ಪ್ರವಾಸದಲ್ಲಿ ನಾವು ತಲುಪಿದ್ದು ಜಮೈಕಾದ ಸೌಲ್‌ಮೌತ್ ದ್ವೀಪಕ್ಕೆ. ಕೆರಿಬಿಯನ್ ದ್ವೀಪದ ಈ ಪುಟ್ಟ ದೇಶವು 1962ರಲ್ಲಿ ಸ್ವಾತಂತ್ರ್ಯ ಪಡೆದಿದ್ದು, ಬರೀ 29 ಲಕ್ಷ ಜನಸಂಖ್ಯೆ ಹೊಂದಿದೆ. ತಿಳಿನೀಲಿ ಸಮುದ್ರದಲ್ಲಿ ವಿಹರಿಸಿ, ಡಾಲ್ಫಿನ್ ಜತೆ ಆಟವಾಡಿದ್ದು, ಪ್ರವಾಸದ ಸಂತಸವನ್ನು ಇಮ್ಮಡಿಗೊಳಿಸಿತ್ತು. ಸಮುದ್ರ ತೀರದಲ್ಲಿ ವಿಹರಿಸುತ್ತಿದ್ದ ನಮಗೆ ಸಮಯದ ಸರಿದದ್ದು ಅರಿವಾಗಿದ್ದು ಮತ್ತೆ ಕರೆ ಬಂದಾಗಲೇ. ಮತ್ತೆ ಹಡಗು ಸೇರಿ ಉಪಾಹಾರ ಸೇವಿಸಿ ಮುಂದಿನ ದಿನದ ಪ್ರವಾಸಕ್ಕೆ ಅಣಿಯಾದೆವು.

ಈ ಪ್ರವಾಸದಲ್ಲಿ ಮರೆಯಲಾಗದ ಹಲವು ಅನುಭವಗಳಾದವು, ಇಲ್ಲಿನ ಡಾಲ್ಫಿನ್ ದೇವಸ್ಥಾನಕ್ಕೆ ಭೇಟಿ ನೀಡಿದ್ದು ಅದರಲ್ಲಿ ಒಂದು. ವೆಸ್ಟ್‌ಇಂಡೀಸ್‌ನ ಸಂಗೀತ ಶೈಲಿಯಲ್ಲಿ ಕ್ರಾಂತಿ ಎಬ್ಬಿಸಿ 36ರ ಹರೆಯದಲ್ಲೇ ಇಹಲೋಕ ತ್ಯಜಿಸಿದ ಬಾಬ್ ಮಾರ್ಲೆ ಹುಟ್ಟಿದ ನೆಲವನ್ನು ಮುಟ್ಟಿ ರೋಮಾಂಚನಗೊಂಡೆವು. ಈ ಭಾಗದ ಸಂಸ್ಕೃತಿ, ಭಾಷೆಯ ಕುರಿತು ಮಾರ್ಗದರ್ಶಿಗಳು ನೀಡಿದ ಮಾಹಿತಿಗಳು ಇನ್ನಷ್ಟು ಕುತೂಹಲ ಮೂಡಿಸಿದವು. ಬಣ್ಣ ಬಣ್ಣದ ಮಕಾವ್ ಹಾಗೂ ಲವ್‌ಬರ್ಡ್ಸ್‌ಗಳು ನಮ್ಮ ಜತೆಗಿದ್ದು ಫೋಟೋಗೆ ಪೋಸು ಕೊಟ್ಟಿದ್ದು ಮರೆಯಲಾಗದ ಅನುಭವ.

ದಿನಕ್ಕೊಂದು ಹೊಸ ಹೊಸ ಪ್ರದೇಶಗಳ ಪ್ರವಾಸವು ಹೊಸ ಪ್ರಪಂಚ, ಜನ, ಸಂಸ್ಕೃತಿಯ ಪರಿಚಯ ಮಾಡಿಕೊಡುತ್ತಿತ್ತು, ಹೀಗೆ ಕೆರಿಬಿಯನ್ ದ್ವೀಪದ ಪ್ರವಾಸ ಮುಗಿಸಿ ರಾತ್ರಿ ತಂಗಿದವರು ಐದನೇ ದಿನಕ್ಕೆ ಬಂದಿಳಿದಿದ್ದು ಕೇಮನ್ ದ್ವೀಪಕ್ಕೆ. ಬೃಹತ್ ಕೊರಕಲು ಶಿಖರಗಳ ಮಧ್ಯೆಭಾಗದಲ್ಲಿ ಕೊಲರಾಡೋ ದ್ವೀಪ ಗಮನ ಸೆಳೆಯಿತು. ಅಮೆರಿಕಕ್ಕೆ ಸನಿಹದಲ್ಲಿದ್ದರೂ, ಈಗಲೂ ಇದು ಬ್ರಿಟನ್ ರಾಣಿಯ ಆಡಳಿತಕ್ಕೆ ಒಳಪಟ್ಟಿದ್ದು, ಗವರ್ನರ್‌ರನ್ನು ಕೂಡ ಅವರೇ ನೇಮಿಸುತ್ತಾರೆ. 277 ಮೈಲಿ ಉದ್ದ ಹಾಗೂ 18 ಮೈಲಿ ಅಗಲಕ್ಕೆ ವಿಸ್ತರಿಸಿಕೊಂಡಿರುವ ಈ ದ್ವೀಪದಲ್ಲಿ ಕನ್ನಡಿಗರು ಖುಷಿ ಪಡುವ ಸಂಗತಿಯೆಂದರೆ, ಕರ್ನಾಟಕ ಮೂಲದ ಖ್ಯಾತ ಹೃದ್ರೋಗ ತಜ್ಞ ಡಾ.ದೇವಿಪ್ರಸಾದ್ ಶೆಟ್ಟಿ ಅವರ ಆಸ್ಪತ್ರೆ ಇರುವುದು! ಇಲ್ಲಿನ ಮತ್ತೊಂದು ವಿಶೇಷ ರಮ್‌ನಿಂದ ತಯಾರಿಸುವ ಕೇಕ್. ಅವತ್ತು ತಿಂದ ಕೇಕನ್ನು ನೆನಪಿಸಿಕೊಂಡರೆ ಈಗಲೂ ಬಾಯಲ್ಲಿ ನೀರೂರುತ್ತದೆ.

ಐದು ದಿನದಲ್ಲಿ ಭಿನ್ನ ರಾಷ್ಟ್ರಗಳ ಪರಿಚಯ ಮಾಡಿಕೊಂಡ ನಾವು ಐದನೇ ದಿನ ಪ್ರವಾಸದ ಕೊನೇ ಹಂತಕ್ಕೆ ಬಂದು ತಲುಪಿದ್ದೆವು. ಉತ್ತರ ಅಮೆರಿಕದಲ್ಲಿ ಮೀನಿನ ಆಕಾರದಲ್ಲಿರುವ ಕಾಸ್ಮೆಲ್, ಸಾಹಸಪ್ರಿಯರಿಗೆ ಹೇಳಿ ಮಾಡಿಸಿದಂತಿದೆ. ಮೆಕ್ಸಿಕೋದ ಕಾಸ್ಮೆಲ್‌ಗೆ ಬಂದಿಳಿದವರೇ ಸ್ಕೂಟರ್‌ವೊಂದನ್ನು ಬಾಡಿಗೆ ಪಡೆದುಕೊಂಡು ಸಾಹಸಕ್ಕೆ ಅಣಿಯಾದೆವು.

ಬೀಚ್‌ನಲ್ಲಿ ಆಟವಾಡಿ, ಒಂದಿಷ್ಟು ಸಾಹಸಕ್ರೀಡೆಗಳಲ್ಲಿ ಪಾಲ್ಗೊಂಡೆವು. ಇಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿರುವುದು ಟಕಿಲಾ ಎಂಬ ಮದ್ಯ. ಇದನ್ನು ತಯಾರಿಸುವುದನ್ನು ತಿಳಿಸಿಕೊಟ್ಟರು. ಅಂದ ಹಾಗೆ ಮೆಕ್ಸಿಕೋ ದೇಶಕ್ಕೆ ಬೇರೆ ದೇಶದ ಹಣ್ಣುಗಳನ್ನು ಒಳಗಡೆ ತರಲು ಬಿಡುವುದಿಲ್ಲ. ವಿದೇಶದ ಕೀಟಾಣುಗಳು ತಮ್ಮ ದೇಶದೊಳಕ್ಕೆ ಪ್ರವೇಶಿಸಬಹುದು ಎಂಬ ಎಚ್ಚರಿಕೆ. ಬೀಚ್‌ನಲ್ಲಿ ಸುತ್ತಾಡಿ, ಊಟ ಮಾಡಿ ಸ್ಕೂಟರನ್ನು ಹಿಂದಕ್ಕೆ ನೀಡಿದೆವು. ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮಾಯನ್ ನಾಗರಿಕತೆಯ ಸ್ಥಳವನ್ನು ನೋಡಬೇಕೆಂಬ ಮಹದಾಸೆಯಿದ್ದರೂ, ಸಮಯದ ಅಭಾವದಿಂದ ನೋಡಲು ಸಾಧ್ಯವಾಗಲಿಲ್ಲ.

ಶನಿವಾರ ಮತ್ತೆ ಹಡಗನ್ನೇರಿ, ಪೋರ್ಟ್ ಕೆನೆವರಲ್ ತಲುಪಿದಾಗ ಭಾನುವಾರ ಮಧ್ಯಾಹ್ನವಾಗಿತ್ತು. ಪ್ರವಾಸ ಹೋಗಿದ್ದು ಒಂದೇ ವಾರ–ವಾದರೂ, ನೆನಪುಗಳು ನೂರು ವರ್ಷಗಳಿಗೆ ಆಗುವಷ್ಟಿದೆ!